# ಪತ್ರಿಕಾ ಪ್ರಕಟಣೆ (೧೦-೫-೧೭)
## ಡಾ। ಎಂ.ಎಂ. ಶೆಣೈ, ಕಾರ್ಯದರ್ಶಿ, ಮೈಸೂರು ಗ್ರಾಹಕರ ಪರಿಷತ್
## ಮೈಗ್ರಾಪ ಮಾಸಿಕ ಸಭೆ

ಮೈಸೂರು ಗ್ರಾಹಕರ ಪರಿಷತ್ತಿನ ಮಾಸಿಕ ಸಾರ್ವಜನಿಕ ಸಭೆಯು ದಿ. ೧೪-೫-೧೭ ಭಾನುವಾರದಂದು ಅಪರಾಹ್ನ ೪ ಘಂಟೆಗೆ ೬/೧, ವಿವೇಕಾನಂದ ರಸ್ತೆ, ಯಾದವಗಿರಿ, ಈ ವಿಳಾಸದಲ್ಲಿ ನಡೆಯುವುದು. ಸಭೆಯಲ್ಲಿ ಮೈಸೂರಿನ ಹಸುರೀಕರಣವನ್ನು ಚರ್ಚಿಸಲಾಗುವುದು. ನಗರಪ್ರದೇಶಗಳ ಹಸುರೀಕರಣಕ್ಕೆ ಸಂಬಂಧಿಸಿದ ಅರಣ್ಯಾಧಿಕಾರಿ ಎಸ್. ಗಿರೀಶ್ ಅವರು ಸಾರ್ವಜನಿಕರೊಡನೆ ವಿಚಾರವಿನಿಮಯ ಮಾಡಿಕೊಳ್ಳಲಿದ್ದಾರೆ. ಮೈಗ್ರಾಪ ಕಾರ್ಯಕಾರಿಣಿಯ ಸದಸ್ಯರಾದ ಅಶ್ವಿನಿ ರಂಜನ್ ಅವರು ಮೈಗ್ರಾಪ ದ ಮರ ನೆಡುವ ಕಾರ್ಯಕ್ರಮದ ಬಗ್ಗೆ ಮಾತನಾಡಿ ಮೈಸೂರಿನ ಹಸುರೀಕರಣದಲ್ಲಿ ಸಾರ್ವಜನಿಕರ ಪಾತ್ರದ ಬಗ್ಗೆ ಚರ್ಚೆಯನ್ನು ಪ್ರಾರಂಭಿಸುವರು.

ಸಾರ್ವಜನಿಕರು ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗಾಗಿ ೨೫೧೫೧೫೦ ಸಂಪರ್ಕಿಸಿ.